ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

2

ಇಲಾಖೆ / ವಿಷಯ : DEPARTMENT / SUBJECT: ಮುಖ್ಯಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE 22/7/2020

# ಒಂದು ರೂಪಾಯಿ ಕೂಡ ದುರುಪಯೋಗವಾಗಿಲ್ಲ

ಉ.ವಾ. 22/7/20

**ಬೆಂಗಳೂರು:** ಕೊರೊನಾ ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಹಾಗೂ ಯಾವುದೇ ಇಲಾಖೆ ಕಡೆಯಿಂದ ಖರೀದಿ ಮಾಡಿರುವ ವಸ್ತುಗಳಲ್ಲಿ ಒಂದು ರೂಪಾಯಿಯೂ ಅವ್ಯವಹಾರ ಆಗಿಲ್ಲ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸ್ಪಷ್ಟಪಡಿಸಿದರು.

ಮಂಗಳವಾರ ರಾಜ್ಯದ ಜನತೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಕೊರೊನಾ ತಡೆಗಟ್ಟುವಲ್ಲಿ ಪ್ರತಿಪಕ್ಷಗಳ ಸಹಕಾರ ಅತಿಮುಖ್ಯವಾಗಿದೆ. ಕೊರೊನಾ ಸಂದರ್ಭದಲ್ಲಿ ಅನಗತ್ಯ ಟೀಕೆ ಮಾಡುವ ಬದಲು, ರಚನಾತ್ಮಕ ಸಲಹೆ ನೀಡಬೇಕು. ಪ್ರತಿಪಕ್ಷದ ನಾಯಕರಾದ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಎಚ್.ಡಿ.ಕುಮಾರಸ್ವಾಮಿ ಸೇರಿದಂತೆ ಯಾರೇ ರಚನಾತ್ಮಕ ಸಲಹೆ ನೀಡಿದರೂ ಸ್ವೀಕಾರ ಮಾಡುತ್ತೇವೆ ಎಂದರು.

ಕೊರೊನಾ ತಡೆಗಟ್ಟುವ ನಿಟ್ಟಿನಲ್ಲಿ ಪ್ರತಿಪಕ್ಷದವರು ಏನೇ ಮಾಹಿತಿ ಬೇಕಾದರೂ ಕೇಳಬಹುದು. 24 ಗಂಟೆಯಲ್ಲಿ ಎಲ್ಲ ಮಾಹಿತಿ ಒದಗಿಸುವ ಪ್ರಯತ್ನ ಮಾಡುತ್ತೇವೆ. ಯಾರು ಬೇಕಾದರೂ ದಾಖಲೆ ಪರಿಶೀಲನೆ ಮಾಡಬಹುದು. ಮಾಹಿತಿ ನೀಡಲು ಅಧಿಕಾರಿಗಳು ಸಿದ್ಧರಿದ್ದಾರೆ. ಪ್ರತಿಪಕ್ಷದ ನಾಯಕರು ಯಾವಾಗ ಬೇಕಾದರೂ ಬಂದು ಪರಿಶೀಲಿಸಬಹುದು ಎಂದು ಹೇಳಿದರು.

ಕೊರೊನಾ ಸಂದಿಗ್ಧತೆಯಲ್ಲಿ ಜನರು ಸಿಕ್ಕಿಕೊಂಡಿರುವಾಗ ಸರ್ಕಾರ ಮತ್ತು ಪ್ರತಿಪಕ್ಷಗಳ ನಡುವೆ ಗೊಂದಲ ಇದ್ದರೆ, ಜನರು ಗೊಂದಲಕ್ಕೆ ಈಡಾಗುತ್ತಾರೆ. ಪಕ್ಷ ಬೇಧ ಮರೆತು ಒಂದಾಗಿ ಕೊರೊನಾವನ್ನು ಎದುರಿಸಬೇಕೇ ವಿನಃ, ಕೊರೊನಾದಿಂದ ಜನರು ನರಳುತ್ತಿರುವಾಗ ನಾವೆಲ್ಲರೂ ವಿಭಿನ್ನ ಹೇಳಿಕೆ ನೀಡುವುದು ತರವಲ್ಲ, ಇದರಿಂದ ಜನರಲ್ಲಿ ಇನ್ನಷ್ಟು ಗೊಂದಲ ಸೃಷ್ಟಿಯಾಗುತ್ತದೆ. ಜನರಲ್ಲಿರುವ ಗೊಂದಲ ನಿವಾರಿಸಿ, ಎಲ್ಲರೂ ಒಂದಾಗಬೇಕು ಎಂದು ಕರೆಕೊಟ್ಟರು.

ಬೆಂಗಳೂರಿನ ವಸ್ತುಪ್ರದರ್ಶನ ಕೇಂದ್ರದ ಕೊರೊನಾ ಆರೈಕೆ ಕೇಂದ್ರದಲ್ಲಿ 6200 ಹಾಸಿಗೆ ಸಿದ್ಧಪಡಿಸಿರುವ ಸ್ಥಳಕ್ಕೆ ಸಿದ್ದರಾಮಯ್ಯನವರು ಭೇಟಿ ಮಾಡಿದ್ದಾರೆ. ನಂತರ ನಾನು ಸ್ಥಳ ತನಿಖೆ ನಡೆಸಿ, 6200 ಮಂಚಗಳಿಗೆ ದಿನಕ್ಕೆ 800 ರೂ. ಬಾಡಿಗೆ ಕೊಡುವ ಬದಲು, 7.25 ಕೋಟಿ ರೂ.ಗಳಲ್ಲಿ ಎಲ್ಲ ಮಂಚ ಖರೀದಿಸಲು ನಿರ್ಧರಿಸಿದ್ದೇವೆ. ಈ ಹಾಸಿಗೆಗಳನ್ನು ನಂತರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕೊಡದೆ, ಸುಟ್ಟು ಹಾಕುತ್ತೇವೆ. ಮಂಚಗಳನ್ನು ಮಾತ್ರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಬಳಕೆ ಮಾಡಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಹೇಳಿದರು.

ಕೊರೊನಾ ತಡೆಯುವ ನಿಟ್ಟಿನಲ್ಲಿ ಮಾಧ್ಯಮದವರು ಅತ್ಯಂತ ಶ್ಲಾಘನೀಯ ರೀತಿಯಲ್ಲಿ ಕಾರ್ಯನಿರ್ವಹಿಸಿದ್ದಾರೆ. ಕೊರೊನಾ ತಡೆಗಟ್ಟುವ ನಿಟ್ಟಿನಲ್ಲಿ ಯಾವುದೇ ಸಲಹೆ ನೀಡಿದರೂ ಸ್ವೀಕರಿಸುತ್ತೇವೆ. ಎಲ್ಲರ ಮನ್ವಯದ ಹೋರಾಟದಿಂದ ಮಾತ್ರ ಕೊರೊನಾ ನಿರ್ಮೂಲನೆ ಸಾಧ್ಯವಿದೆ. ಜನಸಾಮಾನ್ಯರು ಕೂಡ ಎಚ್ಚರಿಕೆಯಿಂದ ಇರಬೇಕು. ಸರ್ಕಾರ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದರು.

## ಮನೆಯಿಂದ ಹೊರಬರಬೇಡಿ

ಕೊರೊನಾಗೆ ಈವರೆಗೂ ಯಾವುದೇ ಔಷಧ ಬಂದಿಲ್ಲ, ಹೀಗಾಗಿ ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಕಾಪಾಡುವುದು ಅತಿಮುಖ್ಯ. ಆದ್ದರಿಂದ ವಯೋವೃದ್ಧರು ಮನೆಯಿಂದ ಹೊರಗೆ ಬಾರದೇ ಇರುವುದೇ ಒಳ್ಳೆಯದು. ಮಕ್ಕಳು ಕೂಡ ವಿನಾಃ ಕಾರಣ ಮನೆಯಿಂದ ಹೊರಹೋಗದಂತೆ ನೋಡಿಕೊಳ್ಳಬೇಕು. ಕೊರೊನಾ ಸೋಂಕಿತರೊಂದಿಗೆ ಸೌಜನ್ಯದಿಂದ ವರ್ತಿಸಬೇಕು ಮತ್ತು ಎಲ್ಲರೂ ನೆಮ್ಮದಿಯಿಂದ ಬದುಕಲು ಪರಸ್ಪರ ಸಹಕಾರ ಅಗತ್ಯ ಎಂದು ಮುಖ್ಯಮಂತ್ರಿ ಮನವಿ ಮಾಡಿದರು.

- ಕೊರೊನಾ ಉಪಕರಣಗಳ ಖರೀದಿಯಲ್ಲಿ ಅವ್ಯವಹಾರವಾಗಿಲ್ಲ
- ಪ್ರತಿಪಕ್ಷಗಳಿಗೆ ದಾಖಲೆ ನೀಡಲು ಸಿದ್ಧ ಎಂದ ಸಿಎಂ ಬಿಎಸ್‌ವೈ